# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರಕ್ಕೆ 2014-15ನೇ ಸಾಲಿಗೆ ಸಹಾಯಧನ ಮಂಜೂರಾತಿ ಬಗ್ಗೆ.

ಓದಲಾಗಿದೆ: 1) ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಪತ್ರ ಸಂಖ್ಯೆ:ಕ.ರಾ.ನೈ.ವಿ.ಉ.ಕೇ/ಕೃಷಿ/ಅನುದಾನ/118/2014-15, ದಿ:21-05-2014.

2) ಕೃಷಿ ಆಯುಕ್ತರ ಪತ್ರ ಸಂ:ಪಿಎಲ್‌ಎನ್/ತಾಂ-4/ಡಿಎಂಸಿ/2014-15, ದಿ:23-05-2014.

## ಪ್ರಸ್ತಾವನೆ

ಮೇಲೆ ಓದಲಾದ (1)ರ ಪತ್ರದಲ್ಲಿ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವು ಪ್ರತಿ ವರ್ಷದಂತೆ 2014-15ನೇ ಸಾಲಿನಲ್ಲಿಯೂ ಬರ ನಿರ್ವಹಣೆಯನ್ನು ವ್ಯವಸ್ಥಿತ ರೀತಿಯಲ್ಲಿ ಮಾಡಲು ದೀರ್ಘಾವದಿ ಯೋಜನೆಗಳನ್ನು ರೂಪಿಸುವ ಬಗ್ಗೆ ಅಧ್ಯಯನ ಮಾಡಲು ಉದ್ದೇಶಿಸಿದ್ದು ಈ ಅಧ್ಯಯನಕ್ಕಾಗಿ ಕೃಷಿ ಇಲಾಖೆಯಿಂದ 2014-15ನೇ ಸಾಲಿಗೆ ರೂ.5.00 ಲಕ್ಷಗಳನ್ನು ಸಹಾಯ ಅನುದಾನ ರೂಪದಲ್ಲಿ ಬಿಡುಗಡೆ ಮಾಡುವಂತೆ ಕೋರಿದೆ.

ಮೇಲೆ ಓದಲಾದ (2)ರ ಪತ್ರದಲ್ಲಿ 2014-15ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವು ಕೃಷಿ ಬರವನ್ನು ಪ್ರಮಾಣೀಕರಿಸಲು ಕೆಲವು ಅಧ್ಯಯನವನ್ನು ಕೈಗೊಳ್ಳಲು ಕಾರ್ಯಕ್ರಮವನ್ನು ಹಮ್ಮಿಕೊಂಡಿರುವ ಪ್ರಯುಕ್ತ ಸದರಿ ಕೇಂದ್ರಕ್ಕೆ 2014-15ನೇ ಸಾಲಿನ ಆಯವ್ಯಯದಲ್ಲಿ ಚಾಲ್ತಿ ಯೋಜನೆಯ ಮಂಜೂರಾತಿ ಆದೇಶದಂತೆ ಇತರೆ ಕೃಷಿ ಯೋಜನೆಗಳು, ಲೆಕ್ಕ ಶೀರ್ಷಿಕೆ:2401-00-800-1-40 (ಯೋಜನೆ) ಉಪ ಶೀರ್ಷಿಕೆ 100ರಲ್ಲಿ ಒದಗಿಸಲಾದ ಅನುದಾನದಡಿ ರೂ.5.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಿ ಆದೇಶವನ್ನು ಹೊರಡಿಸುವಂತೆ ಮತ್ತು ಸಂಸ್ಥೆಯು ಸಲ್ಲಿಸುವ ಬಿಲ್ಲುಗಳಿಗೆ ಕೃಷಿ ನಿರ್ದೇಶಕರು ಮೇಲು ಸಹಿಮಾಡುವ ಅಧಿಕಾರವನ್ನು ನೀಡುವಂತೆ ಕೃಷಿ ನಿರ್ದೇಶಕರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ:

**ಸರ್ಕಾರದ ಆದೇಶ ಸಂಖ್ಯೆ: ಕೃಇ/61/ಕೃಯೋಕಾ/2014, ಬೆಂಗಳೂರು, ದಿ: 14-07-2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, 2014-15ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ:2401-00-800-1-40 "ಇತರೇ ಕೃಷಿ ಯೋಜನೆಗಳು" ಉಪ ಶೀರ್ಷಿಕೆ 100-ಧನಸಹಾಯ /ಪರಿಹಾರದಡಿ ಒದಗಿಸಿರುವ ಅನುದಾನದಲ್ಲಿ ಈಗಾಗಲೇ ಬಿಡುಗಡೆಯಾಗಿರುವ ಮೊದಲನೇ ತ್ರೈಮಾಸಿಕ ಮೊತ್ತದಿಂದ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರಕ್ಕೆ, ಕೃಷಿ ಬರವನ್ನು ಪ್ರಮಾಣೀಕರಿಸಲು ಅಧ್ಯಯನಕ್ಕಾಗಿ ರೂ.5.00 ಲಕ್ಷ (ಐದು ಲಕ್ಷ ರೂಪಾಯಿಗಳು ಮಾತ್ರ) ಗಳ ಆರ್ಥಿಕ ನೆರವನ್ನು ಸದರಿ ಸಂಸ್ಥೆಗೆ ಸಹಾಯಾನುದಾನವಾಗಿ ನೀಡಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಸಂಸ್ಥೆಯು ಸಲ್ಲಿಸುವ ಬಿಲ್ಲುಗಳಿಗೆ ಕೃಷಿ ನಿರ್ದೇಶಕರಿಗೆ ಮೇಲು ಸಹಿಮಾಡುವ ಅಧಿಕಾರವನ್ನು ನೀಡಲಾಗಿದೆ.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ:ಕೃಇ/69/ಆಂ.ಆ.ಸ/2014, ದಿ:18-06-2014 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಜ್ಯೋತಿ.ಆರ್.ಜೆ),
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ).

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
3. ಪ್ರಧಾನ ಮಹಾಲೇಖಪಾಲರು (ಂ&ಇ), ಕರ್ನಾಟಕ ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು
4. ಆಯುಕ್ತರು/ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
5. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ , ಬೆಂಗಳೂರು.
6. ನಿರ್ದೇಶಕರು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ, ಮೇಜರ್ ಸಂದೀಪ್, ಉನ್ನಿ ಕೃಷ್ಣನ್ ರಸ್ತೆ, ಅಟ್ಟೂರ್ ಲೇಔಟ್, ಯಲಹಂಕ, ಬೆಂಗಳೂರು-64.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ-4), ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬೆಂಗಳೂರು.
9. ಸರ್ಕಾರದ ಉಪ ಕಾರ್ಯದರ್ಶಿ-1 ಮತ್ತು 2 ರವರ ಆಪ್ತ ಸಹಾಯಕರು, ಕೃಷಿ ಇಲಾಖೆ.
10. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.